**Crl Misc No.127/2025**
**PW-1**

ದಿನಾಂಕ **07-02-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಎದುರುದಾರರ ಪರ: ಶ್ರೀ ಆರ್.ಬಿ.ಡಿ ವಕೀಲರಿಂದಃ</u>

ನನ್ನ ಮತ್ತು ಎದುರುದಾರನ ಮದುವೆ ಈಗ 27 ವರ್ಷಗಳ ಹಿಂದೆ ಆಗಿದ್ದು ನಮಗೆ ಇಬ್ಬರು ಮಕ್ಕಳು ಇದ್ದಾವೆ. ನನ್ನ ಮಗನಿಗೆ ಈಗ 23-24 ವರ್ಷ ವಯಸ್ಸು ಹಾಗೂ ನನ್ನ ಮಗಳಿಗೆ ಅಂದಾಜು 20 ವರ್ಷ ವಯಸ್ಸಾಗಿದೆ. ಮದುವೆಯಾದ ನಂತರ 10 ವರ್ಷಗಳ ವರೆಗೆ ನಾನು ಹಾಗೂ ಎದುರುದಾರ ಚೆನ್ನಾಗಿ ಇದ್ದೆವು. ನನ್ನ ಇಬ್ಬರು ಮಕ್ಕಳು ಆಶನಾಳ ಗ್ರಾಮದಲ್ಲಿ ಜನಿಸಿರುತ್ತಾರೆ. ನನ್ನ ಮಗ ಕೂಲಿ ಕೆಲಸ ಮಾಡುತ್ತಾನೆ. ಈಗ 16-17 ವರ್ಷಗಳಿಂದ ನಾನು ಹಾಗೂ ಎದುರುದಾರ ಬೇರೆ-ಬೇರೆಯಾಗಿದ್ದೇವೆ. 16-17 ವರ್ಷಗಳಿಂದ ನಾನು ಗಂಡನ ಮನೆಯೊಂದಿಗೆ ಸಂಪರ್ಕ ಹೊಂದಿಲ್ಲ ಎಂದರೆ ಸರಿ. ನಾನು 17 ವರ್ಷಗಳಿಂದ ತವರು ಮನೆಯಲ್ಲಿಯೇ ವಾಸವಾಗಿದ್ದೇನೆ ಎಂದರೆ ಸರಿ.

2. ನನ್ನ ತವರು ಮನೆಯಲ್ಲಿ ನಾನು, ನನ್ನ ತಾಯಿ ಹಾಗೂ ಅಣ್ಣ-ತಮ್ಮಂದಿರು ಇರುತ್ತೇವೆ. ನನ್ನ ಒಬ್ಬ ಸಹೋದರ ಗ್ರಾಮದಲ್ಲಿ ಹಾಗೂ ಇನ್ನೊಬ್ಬ ಬೆಂಗಳೂರಿನಲ್ಲಿ ಇರುತ್ತಾರೆ. ನಿಮ್ಮ ತವರು ಮನೆ ಹೊಲಗಳನ್ನು ನೀವು ಹಾಗೂ ನಿಮ್ಮ ತಾಯಿಯೇ ನೋಡಿಕೊಳ್ಳುತ್ತೀರಿ ಎಂದರೆ ಸಾಕ್ಷಿ ನಾವು ಹಾಗೂ ನನ್ನ ಸಹೋದರರು ಸೇರಿ ನೋಡಿಕೊಳ್ಳುತ್ತೇವೆ ಎಂದು ನುಡಿಯುತ್ತಾರೆ. ನನ್ನ ತವರು ಮನೆ ಕುಟುಂಬಕ್ಕೆ 16 ಎಕರೆ ಜಮೀನು ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 3-4 ಎಕರೆ ಮಾತ್ರ ಇದೆ ಎಂದು ನುಡಿಯುತ್ತಾರೆ.

3. ನನ್ನ ಮಗ 11 ನೇ ತರಗತಿ ವರೆಗೆ ಓದಿದ್ದಾನೆ. ನನ್ನ ಮಗ ಖಾಸಗಿ ಕಂಪನಿಯಲ್ಲಿ ಕೆಸಲ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ನನ್ನ ಮಗ ಬೆಂಗಳೂರಿನಲ್ಲಿ ಒಂದು ಮನೆ ಹಾಗೂ ಕಾರು ಮತ್ತು ಆಟೋ ಹೊಂದಿರುತ್ತಾನೆ ಎಂದರೆ ಸರಿಯಲ್ಲ. ನಾನು 17 ವರ್ಷಗಳಿಂದ ನನ್ನ ಗಂಡನ ಮನೆಯ ಯಾವುದೇ ಕಾರ್ಯಕ್ರಮಕ್ಕೆ ಹೋಗಿಲ್ಲ ಎಂದರೆ ಸರಿ. ನನ್ನ ಗಂಡ ತನ್ನ ತಂದೆ-ತಾಯಿಯ ಹಿರಿಯ ಮಗ ಆಗಿರುತ್ತಾನೆ ಎಂದರೆ ಸರಿ. ಎದುರುದಾರನಿಗೆ 05 ಜನ ಸಹೋದರರಿದ್ದಾರೆ ಎಂದರೆ ಸರಿ. ನಾನು

ಗಂಡನ ಮನೆಯಲ್ಲಿ ಕೆಲಸ ಮಾಡದೇ ಗಂಡನ ಮನೆ ಬಿಟ್ಟು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರನ ಕುಟುಂಬದವರು ಜಮೀನು ಹೊಂದಿರುವುದಿಲ್ಲ ಹಾಗಾಗಿ ನಾನು ಕೂಲಿ ಕೆಲಸ ಮಾಡಲು ಆಗದೇ ಗಂಡನನ್ನು ಬಿಟ್ಟು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರ ಕುಡಿದು ಹೊಡಿ-ಬಡಿ ಮಾಡುತ್ತಿದ್ದನು ಎಂದರೆ ಸರಿಯಲ್ಲ. ಎದುರುದಾರನ ಕುಟುಂಬದವರು ಸರ್ವೆ ನಂ.293 ರಲ್ಲಿನ 01 ಎಕರೆ 25 ಗುಂಟೆ ಜಮೀನು ಮಾತ್ರ ಹೊಂದಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಮಾವನ ಹೆಸರಿನಲ್ಲಿಯೂ ಸಹ ಜಮೀನು ಇದೆ ಎಂದು ನುಡಿಯುತ್ತಾರೆ. ನನ್ನ ಮಾವನ ಹೆಸರಿನಲ್ಲಿ ಇರುವ ಜಮೀನಿನ ಸರ್ವೆ ನಂಬರು ನನಗೆ ಗೊತ್ತಿಲ್ಲ. ನನ್ನ ಮಾವನ ಹೆಸರಿನಲ್ಲಿ ಇರುವ ಜಮೀನುಗಳ ಹೆಸರುಗಳು ಸಹ ನನಗೆ ಗೊತ್ತಿಲ್ಲ. ಸರ್ವೆ ನಂ.293 ರ ಜಮೀನಿನಲ್ಲಿ ಎದುರುದಾರನ ಸಹೋದರರು ಸಹ ಪಾಲು ಹೊಂದಿರುತ್ತಾರೆ ಎಂದರೆ ಸರಿ.

4. ನನ್ನ ಗಂಡನ ಕಾಲು ಮುರಿದಿದೆ ಎಂದರೆ ಸರಿ. ಆದ್ದರಿಂದ ಆತನಿಗೆ ಭಾರವಾದ ವಸ್ತುಗಳನ್ನು ಎತ್ತಲು ಆಗುವುದಿಲ್ಲ ಎಂದರೆ ಸರಿಯಲ್ಲ. ಕಾಲು ಮುರಿದಿರುವುದರಿಂದ ಹೊಲ ಕಾಯುವುದು ಹಾಗೂ ಗದ್ದೆಗೆ ನೀರು ಬಿಡುವುದನ್ನು ಹೊರತು ಪಡಿಸಿ ಎದುರುದಾರನಿಂದ ಬೇರೆ ಯಾವುದೇ ಕೆಲಸ ಆಗುವುದಿಲ್ಲ ಎಂದರೆ ಸರಿಯಲ್ಲ.

5. ನನ್ನ ಚುನಾವಣೆ ಗುರುತಿನ ಚೀಟಿ ಹಾಗೂ ಕುಟುಂಬ ಪಡಿತರ ಚೀಟಿಗಳನ್ನು ಹಾಜರು ಮಾಡಿದ್ದೇನೆ. ಸದರಿ ದಾಖಲೆಗಳಲ್ಲಿ ನನ್ನ ತವರು ಮನೆ ವಿಳಾಸ ನಮೂದು ಇದೆ, ಗಂಡನ ಮನೆ ವಿಳಾಸ ನಮೂದು ಇಲ್ಲ ಎಂದರೆ ಸರಿ. ನಾನು ಕೇವಲ ಎರಡುವರೆ ವರ್ಷಗಳ ಕಾಲ ಮಾತ್ರ ಗಂಡನ ಮನೆಯಲ್ಲಿ ಇದ್ದು 2 ನೇ ಹೆರಿಗೆಗೆ ತವರು ಮನೆಗೆ ಹೋಗಿ ಮರಳಿ ಗಂಡನ ಮನೆಗೆ ಬಂದಿಲ್ಲ ಎಂದರೆ ಸರಿಯಲ್ಲ. 2 ನೇ ಮಗು ಹೆಣ್ಣು ಮಗ ಜನಿಸಿರುವ ವಿಷಯವನ್ನು ಸಹ ನಾವು ಎದುರುದಾರನಿಗೆ ತಿಳಿಸಿರಲಿಲ್ಲ ಎಂದರೆ ಸರಿಯಲ್ಲ. 2 ನೇ ಮಗು ಜನಿಸಿದ ನಂತರ ನಾನು ಗಂಡನ ಮನೆಗೆ ಹೋಗಿಲ್ಲ ಎಂದರೆ ಸರಿಯಲ್ಲ.

6. ಕೂಲಿ ಕೆಲಸದಿಂದ ತಿಂಗಳಿಗೆ ರೂ.20 ಸಾವಿರ ಆದಾಯ ಬರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರ ಅಂಗವಿಕಲನಾಗಿರುವುದರಿಂದ ಆತನಿಗೆ ಯಾರು ಕೂಲಿ ಕೆಲಸ ಕೊಡುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರ ವಾರ್ಷಿಕ ರೂ.4 ಲಕ್ಷ ಆದಾಯ ಹೊಂದಿರುತ್ತಾನೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಾನು 20 ವರ್ಷಗಳಿಂದ ಗಂಡನನ್ನು ಬಿಟ್ಟು ಆರಾಮಾಗಿದ್ದು ಈಗ ಸುಳ್ಳು ಅರ್ಜಿ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಈಗ ನನ್ನ ಎಲ್ಲ ಖರ್ಚು-ವೆಚ್ಚಗಳನ್ನು ನನ್ನ ಮಗ ನೋಡಿಕೊಳ್ಳುತ್ತಿದ್ದಾನೆ ಎಂದರೆ ಸರಿಯಲ್ಲ. ನಾನು ನನ್ನ ಮಕ್ಕಳೊಂದಿಗೆ ವಾಸವಾಗಿದ್ದೇನೆ ಎಂದರೆ ಸರಿ. ಎದುರುದಾರ ತಮ್ಮ ಜಮೀನನ್ನು ಸೋಲಾರ್ ಕಂಪನಿಗೆ ಬಾಡಿಗೆಗೆ ಕೊಟ್ಟಿರುವ ವಿಷಯ ತಿಳಿದು ನಾನು ಆತನಿಂದ ಹಣ ವಸೂಲಿ ಮಾಡುವ ಉದ್ದೇಶದಿಂದ ಈ ಸುಳ್ಳು ಅರ್ಜಿ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ